**ಸಾಕ್ಷಿಯನ್ನು ಕರೆಸಿ ದಿನಾಂಕಃ 07-01-2025ರಂದು ಪ್ರಮಾಣವಚನ ಬೋಧಿಸಲಾಯಿತು.**

**ಮುಂದುವರಿದ ಮುಖ್ಯ ವಿಚಾರಣೆಃ ಎದುರುದಾರರ ಪರ ವಕೀಲರಾದ ಶ್ರೀ ಎಸ್. ಎಂ. ಭಾಗ್ವತರಿಂದಃ**

ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸತ್ಯವಾಗಿರುತ್ತದೆ ಎಂದು ಪ್ರಮಾಣೀಕರಿಸುತ್ತೇನೆ.

ಅಥೊರೈಸೇಶನ್ ಲೆಟರ್ ನಿಆರ್-1ಎಂದು, ವಿಮಾ ಪಾಲಿಸಿ ಕಾಪಿಯನ್ನು ನಿಆರ್-2 ಎಂದು, ಪರ್ಮಿಟ್ ನಿಆರ್-3 ಎಂದು ಗುರುತಿಸಲಾಯಿತು. ಆದ್ದರಿಂದ ಅರ್ಜಿಯನ್ನು ತಿರಸ್ಕರಿಸಲು ಪ್ರಾರ್ಥನೆ.

**ಪಾಟೀ ಸವಾಲುಃ ಅರ್ಜಿದಾರರ ಪರ ವಕೀಲರಾದ ಶ್ರೀ ಕೆ. ಆರ್. ನಾಯ್ಕರಿಂದಃ**

ಯಾವುದೇ ವಾಹನಕ್ಕೆ ವಿಮೆ ನೀಡುವ ಕಾಲಕ್ಕೆ 64ವಿಬಿ ದೃಢೀಕರಣ ಹಾಜರುಪಡಿಸಬೇಕಾಗುತ್ತದೆ ಮತ್ತು ಆ ಕಾಲಕ್ಕೆ ವಾಹನದ ಆರ್.ಸಿ. ಕೇಳಲಾಗಿರುತ್ತದೆ. ವಿಮೆ ನೀಡುವ ಮೊದಲು ವಾಹನದ ಪರ್ಮಿಟ್ ಹಾಜರುಪಡಿಸಬೇಕು ಎಂದರೆ ಅದು ಏಜಂಟರ ಮೇಲೆ ಅವಲಂಬಿತವಾಗಿರುತ್ತದೆ ಎನ್ನುತ್ತಾರೆ. ಈ ಪ್ರಕರಣದಲ್ಲಿ ವಿಮೆ ನೀಡುವ ಕಾಲಕ್ಕೆ ಯಾರು ಏಜಂಟ್ ಇದ್ದರು ನನಗೆ ಹೇಳಲಾಗುವುದಿಲ್ಲ. ನಿಆರ್-1ರಲ್ಲಿ ಏಜಂಟ್ ನಂಬರ್ ಮತ್ತು ಕೋಡನ್ನು ನಮೂದು ಮಾಡಲಾಗಿದೆ, ಹೆಸರನ್ನು ನಮೂದು ಮಾಡಿರುವುದಿಲ್ಲ. ಪಾಲಿಸಿಯನ್ನು ನೋಡಿಕೊಂಡು ಪಾಲಿಸಿ ನೀಡುವ ಕಾಲಕ್ಕೆ ಏನೆಲ್ಲ ದಾಖಲೆಗಳನ್ನು ನೀಡಲಾಗಿತ್ತು ಎಂದು ಹೇಳಲಾಗುವುದಿಲ್ಲ. ನಾನು ಪೋಲೀಸರ ದಾಖಲೆ ಮತ್ತು ಆರ್.ಟಿ.ಓ. ರವರಿಂದ ಪಡೆದ ದಾಖಲೆಗಳ ಮೇಲೆ ಸಾಕ್ಷಿ ಹೇಳುತ್ತಿದ್ದೇನೆ. ವಿಮಾ ಕಂಪನಿಯಲ್ಲಿ ವಾಹನಕ್ಕೆ ಸಂಬಂಧಪಟ್ಟ ಆರ್.ಸಿ., ಎಫ್.ಸಿ. ಮತ್ತು ಪರ್ಮಿಟ್‌ನ್ನು ಇಟ್ಟುಕೊಂಡಿದ್ದೇವೆ. ಯಾವುದೇ ವಾಹನ ಓಡಾಡುವ ಸ್ಥಿತಿಯಲ್ಲಿ ಇಲ್ಲದಿದ್ದರೆ ಅಥವಾ ಎಫ್.ಸಿ. ಇಲ್ಲದಿದ್ದರೆ ಅಥವಾ ಪರ್ಮಿಟ್ ಇಲ್ಲದಿದ್ದರೆ ವಿಮೆ ನೀಡುವುದಿಲ್ಲ ಎಂದರೆ ಸರಿ. ಎಫ್.ಸಿ. ಮತ್ತು ಪರ್ಮಿಟ್ ಇದ್ದರೆ ಮಾತ್ರ ವಿಮೆ ನೀಡುತ್ತೇವೆ ಎಂದರೆ ಸರಿ. ಲಿಖಿತ ತಕರಾರಿನಲ್ಲಿ ವಾಹನಕ್ಕೆ ಪರ್ಮಿಟ್ ಇಲ್ಲ ಎಂದು ಹೇಳಲಾಗಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಲಿಖಿತ ತಕರಾರು ಸಲ್ಲಿಸುವ ಕಾಲಕ್ಕೆ ಎಲ್ಲಾ ದಾಖಲೆಗಳನ್ನು ಪರಿಶೀಲಿಸಿ ಸಲ್ಲಿಸಲಾಗಿರುತ್ತದೆ ಎಂದರೆ ಸರಿ. ದಾಖಲೆಗಳ ಆಧಾರದಲ್ಲಿ ವಿಮಾ ಕಂಪನಿಯ ಅಧಿಕಾರಿಗಳು ಮಾಹಿತಿ ನೀಡಿರುತ್ತಾರೆ. ಲಿಖಿತ ತಕರಾರು ಸಲ್ಲಿಸುವ ಅಧಿಕಾರಿಯ ಹೆಸರು ನನಗೆ ಗೊತ್ತಿಲ್ಲ. ಈ ಪ್ರಕರಣದಲ್ಲಿ ಟೆಂಪೋ ಜಖಂ ಆಗಿದ್ದು ಅದರ ಮಾಲೀಕರಿಗೆ ಒ.ಡಿ. ಕ್ಲೇಮ್ ಕೊಟ್ಟಿಲ್ಲ. ಈ ಬಗ್ಗೆ ದಾಖಲೆ ಕಂಪನಿಯಲ್ಲಿವೆ, ಹಾಜರುಪಡಿಸಿಲ್ಲ. ಪರ್ಮಿಟನ್ನು ಹಾಜರುಪಡಿಸುವಂತೆ ಟೆಂಪೋ ಮಾಲೀಕರಿಗೆ ನೋಟೀಸು ನೀಡಲಾಗಿದೆ. ಯಾವಾಗ ಎಂಬುದು ನನಗೆ ಗೊತ್ತಿಲ್ಲ. ಅದನ್ನು ಹಾಜರುಪಡಿಸಲು ನನಗೆ ಏನೂ ತೊಂದರೆ ಇಲ್ಲ. ಈ ಪ್ರಕರಣದ ಅಪಘಾತಕ್ಕೆ ಸಂಬಂಧಪಟ್ಟಂತೆ ಸರ್ವೆಯರನನ್ನು ನೇಮಕ ಮಾಡಿ ವರದಿ ತೆಗೆದುಕೊಳ್ಳಲಾಗಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ನಾನು ಕಳೆದ 6 ತಿಂಗಳಿಂದ ವಿಮಾ

ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದೇನೆ. ವಾಹನ ಅಪಘಾತಕ್ಕೆ ಸಂಬಂಧಪಟ್ಟಂತೆ ನನಗೆ ಯಾವುದೇ ವೈಯಕ್ತಿಕ ಮಾಹಿತಿ ಇಲ್ಲ. ಪರಿಹಾರ ತಪ್ಪಿಸಿ ಕೊಳ್ಳಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

**ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು**)

ಓ.ಹೇ.ಕೇ. ಸರಿ ಇದೆ.

**ಸಹಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು, ಪ್ರ.ದ.ನ್ಯಾದಂ.**
**ಹೊನ್ನಾವರ.**